ನೂರ್ ಖಾನ್ ಅವರಿಗೆ. ಆಗ ಅವರು ಪಾಕಿಸ್ತಾನದ ಹಾಕಿ ಫೆಡರೇಷನ್‌ನ ಅಧ್ಯಕ್ಷರೂ ಆಗಿದ್ದರು. 'ವರ್ಲ್ಡ್ ಹಾಕಿ ಮ್ಯಾಗಜೀನ್'ನ ಸಂಪಾದಕ ಪ್ಯಾಟ್ರಿಕ್ ರೋಲಿ ಮೂಲಕ ಅವರು ತಮ್ಮ ಯೋಚನೆಯನ್ನು ಹರಿಬಿಟ್ಟರು. 1969ರ ಅಕ್ಟೋಬರ್ 28ರಂದು ಅವರ ಕನಸು ಸಾಕಾರಗೊಂಡಿತು. ಬ್ರುಸೆಲ್ಸ್‌ನಲ್ಲಿ 1970ರ ಏಪ್ರಿಲ್ 12ರಂದು ನಡೆದ ಸಭೆಯಲ್ಲಿ ಅದಕ್ಕೆ ಅನುಮೋದನೆ ಸಿಕ್ಕಿತು. 1971ರಲ್ಲಿ ಮೊದಲ ವಿಶ್ವಕಪ್ ಹಾಕಿ ನಡೆಸಲು (ಬಾರ್ಸಿಲೋನಾ) ಎಫ್‌ಐಎಚ್ ತೀರ್ಮಾನಿಸಿತು. ಅಂದಿನಿಂದ ಇದುವರೆಗೆ ಅಬಾಧಿತವಾಗಿ ವಿಶ್ವಕಪ್ ಪಂದ್ಯಾವಳಿಗಳು ನಡೆಯುತ್ತಾ ಬಂದಿವೆ. ಹಾಕಿ ಪರಂಪರೆಯ ದೃಷ್ಟಿಯಿಂದ ಭಾರತ–ಪಾಕಿಸ್ತಾನದ ಶಕ್ತಿಗೆ ಕನ್ನಡಿ ಹಿಡಿದರೂ, ರಾಜತಾಂತ್ರಿಕವಾಗಿ ಎರಡೂ ದೇಶಗಳ ನಡುವಿನ ಸಂಬಂಧ ಸುಧಾರಿಸೀತು ಎಂದು ಜನ ನಂಬುತ್ತಾ ಬಂದದ್ದು ಕ್ರಿಕೆಟ್ಟನ್ನು.

1962ರಿಂದ 1977ರ ಅವಧಿಯಲ್ಲಿ ಎರಡೂ ದೇಶಗಳ ನಡುವೆ ಒಂದೂ ಕ್ರಿಕೆಟ್ ಪಂದ್ಯ ನಡೆಯಲಿಲ್ಲ. 1965 ಹಾಗೂ 1971ರ ಯುದ್ಧಗಳು ಕವಿದ ಕರಿಮೋಡದ ಪರಿಣಾಮ ಅದು. 1978ರಿಂದೀಚೆಗೆ ಭಾರತ, ಪಾಕಿಸ್ತಾನ ಎರಡೂ ದೇಶಗಳ ಮಟ್ಟಿಗೆ ಕ್ರಿಕೆಟ್ ಒಂದು ಬೆಳ್ಳಿಮಿಂಚಿನಂತೆ ಭಾಸವಾಗುತ್ತಾ ಬಂತು. ಅಂತರರಾಷ್ಟ್ರೀಯ ಸಂಬಂಧ ಉತ್ತಮಪಡಿಸಿಕೊಳ್ಳುವುದು ರಾಜತಾಂತ್ರಿಕವಾಗಿ ಎಲ್ಲ ದೇಶಕ್ಕೂ ಇರುವ ಸವಾಲು. ಕ್ರಿಕೆಟ್ ನೋಡಲು ಉಭಯ ದೇಶಗಳ ರಾಜಕೀಯ ಮುಖಂಡರು ಆಸಕ್ತಿ ತೋರಿಸಲಾರಂಭಿಸಿದ್ದು ಕೂಡ ರಾಜತಾಂತ್ರಿಕ ತಂತ್ರದ ಭಾಗವೂ ಹೌದು. 1987ರಲ್ಲಿ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಜಿಯಾ–ಉಲ್–ಹಕ್ ಅವರಿಗೆ ಭಾರತದ ವಿರುದ್ಧದ ಟೆಸ್ಟ್ ಪಂದ್ಯ ನೋಡಲು ಮೊದಲ ಬಾರಿಗೆ ಆಹ್ವಾನ ಹೋಯಿತು. ಅಷ್ಟೇ ಅಲ್ಲ, ಅಲ್ಲಿನ ಕೆಲವು ನಾಗರಿಕರಿಗೆ ಭಾರತದಲ್ಲಿ ಕ್ರಿಕೆಟ್ ನೋಡಲು ತೆರಳಲು ಅನುಕೂಲ ಮಾಡಿಕೊಡಲೆಂದೇ ವೀಸಾಗಳನ್ನೂ ಪೂರೈಸುವ ವ್ಯವಸ್ಥೆ ಜಾರಿಗೆ ಬಂತು. ಇದು ಹಾಗೆಯೇ ಮುಂದುವರಿದು, ಭಾರತವು ಪಾಕಿಸ್ತಾನಕ್ಕೆ ಆಡಲು ಹೋದಾಗಲೂ ಇದೇ ರೀತಿ ವೀಸಾ ಒದಗಿಸಲಾಯಿತು.

1961ರಲ್ಲಿ ಭಾರತವು ಪಾಕ್‌ಗೆ ಆಡಲು ಹೋದಾಗ ಕೂಡ ಆಸಕ್ತರಿಗೆ ವೀಸಾ ಸಿಕ್ಕಿದ್ದನ್ನು ಕೆಲವರು ಸ್ಮರಿಸುತ್ತಾರೆ. ಆದರೆ, ಆಗಿನ್ನೂ 'ಕ್ರಿಕೆಟ್ ರಾಯಭಾರ' ಎಂಬ ನುಡಿಗಟ್ಟು ಚಾಲ್ತಿಯಲ್ಲಿರಲಿಲ್ಲ. ಕ್ರಿಕೆಟ್‌ಗಿಂತ ಆಗ ಹಾಕಿ ಜನಪ್ರಿಯ ಕ್ರೀಡೆಯಾಗಿತ್ತು.

ಮೊರಾರ್ಜಿ ದೇಸಾಯಿ ನೇತೃತ್ವದ ಜನತಾ ಪಾರ್ಟಿ ಸರ್ಕಾರ 17 ವರ್ಷಗಳ ಕ್ರೀಡಾಕಂದಕವನ್ನು ಮುಚ್ಚಲು ಮೊದಲು ಕೈಹಾಕಿದ್ದು. ಜನರಲ್–ಜಿಯಾ–ಉಲ್–ಹಕ್ ಕೂಡ ಅದಕ್ಕೆ ಸ್ಪಂದಿಸಿದರು. ಪಾಕಿಸ್ತಾನದಲ್ಲಿ ಬೇಹುಗಾರಿಕೆ ನಡೆಸದಂತೆ ರಿಸರ್ಚ್ ಅಂಡ್ ಅನಲಿಸಿಸ್ ವಿಂಗ್ (RAW)ಗೆ ಮೊರಾರ್ಜಿ ದೇಸಾಯಿ ಆದೇಶವಿತ್ತರು. ಇದರಿಂದ ಅವರು ಪಾಕಿಸ್ತಾನದಲ್ಲಿ ತುಂಬಾ ಜನಪ್ರಿಯರಾದರು. 1990ರಲ್ಲಿ ಅವರಿಗೆ ಪಾಕಿಸ್ತಾನದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ನಿಶಾನ್–ಎ–ಪಾಕಿಸ್ತಾನ್' ಕೂಡ ಸಂದಿತು.
ಕ್ರಿಕೆಟ್ ಮೂಲಕ ಶಾಂತಿಮಂತ್ರ ಹಾಡುವುದು ಮುಂದುವರಿಯಿತಾದರೂ ಕಾಶ್ಮೀರ ಕೊಳ್ಳದ ಕಾರಣಕ್ಕೆ ಉದ್ಭವವಾಗಿದ್ದ ಆತಂಕದ ಹೊಗೆ ಕಡಿಮೆಯಾಗಲೇ ಇಲ್ಲ. ಇದು ಕ್ರಿಕೆಟ್ ಪಿಚ್‌ನಲ್ಲಿನ ಕದಲಿಕೆಗಳ ಮೇಲೂ ಪರಿಣಾಮ ಬೀರಿತ್ತು. 1978ರಲ್ಲಿ ಪಾಕಿಸ್ತಾನವು ಭಾರತದ ಎದುರು ಟೆಸ್ಟ್ ಸರಣಿ ಗೆದ್ದಾಗ, ಕಳಪೆ ಅಂಪೈರಿಂಗ್ ಎಂಬ ದೂರು ಕೇಳಿಬಂತು. ಆಗ ಪಾಕಿಸ್ತಾನ ತಂಡದ ನಾಯಕ ಆಗಿದ್ದ ಮುಷ್ತಾಕ್ ಮೊಹಮ್ಮದ್ 'ಇದು ವಿಶ್ವದ ಎಲ್ಲ ಹಿಂದೂಗಳ ವಿರುದ್ಧ ಮುಸ್ಲಿಮರ ಗೆಲುವು' ಎಂದು ಅತಿಭಾವುಕ ಹೇಳಿಕೆ ನೀಡಿದರು.

ಜಿಯಾ–ಉಲ್–ಹಕ್ ಭಾರತಕ್ಕೆ ಕ್ರಿಕೆಟ್ ನೋಡಲು 1987ರಲ್ಲಿ ಬಂದ ಪ್ರಸಂಗದ ಸುತ್ತಲೂ ವಿವಿಧ ಕಥೆಗಳು ಹುಟ್ಟಿಕೊಂಡವು. ಆಗ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರ ಪಕ್ಕ ಕೂತಿದ್ದರು. ಗಡಿಯಲ್ಲಿ ಅದೇ ಸಂದರ್ಭದಲ್ಲಿ ಭಾರತ ಮಿಲಿಟರಿ ಕಾರ್ಯಾಚರಣೆಯನ್ನು ಚುರುಕುಗೊಳಿಸಿತ್ತು. 'ಪಾಕಿಸ್ತಾನದ ಬಳಿ ನ್ಯೂಕ್ಲಿಯರ್ ಬಾಂಬ್ ಇದೆ ಎಂದು ರಾಜೀವ್ ಗಾಂಧಿ ಕಿವಿಯಲ್ಲಿ ಜಿಯಾ–ಉಲ್–ಹಕ್ ಮೆಲ್ಲಗೆ ಹೇಳಿದರು' ಎಂದು ಆಗ ಬಿಬಿಸಿ ವರದಿ ಪ್ರಕಟಿಸಿತ್ತು.

'ರಾಜೀವ್–ಜಿಯಾ ಒಟ್ಟಿಗೆ ಕುಳಿತು ಕ್ರಿಕೆಟ್ ನೋಡಿದ್ದನ್ನು ಜನ ಆಗ ಹೆಚ್ಚೇನೂ ಶಾಂತಿ ಮನಸ್ಸಿನಿಂದ ಸ್ವೀಕರಿಸಿರಲಿಲ್ಲ. ಪಾಕಿಸ್ತಾನದ ಧೋರಣೆಯ ಬಗೆಗೆ ಭಾರತೀಯರಿಗೆ ನಂಬಿಕೆಯೇ ಇರಲಿಲ್ಲ. ಅದು ಶಾಂತಿಗಾಗಿ ಮುಂದೆ ಬಂದಿದೆ ಎಂದು ಯಾರೂ ಭಾವಿಸಿರಲಿಲ್ಲ' ಎಂದು ಮಾಜಿ ವಿದೇಶಿ ಕಾರ್ಯದರ್ಶಿ ರೊಮೇಶ್ ಭಂಡಾರಿ ವೆಬ್‌ಸೈಟ್ ಒಂದರಲ್ಲಿ ಬಹಳ ಹಿಂದೆಯೇ ಬರೆದಿದ್ದರು.

1989ರಲ್ಲಿ ಭಾರತವು ಪಾಕಿಸ್ತಾನಕ್ಕೆ ಟೆಸ್ಟ್ ಹಾಗೂ ಏಕದಿನದ ಪಂದ್ಯಗಳ ಸರಣಿ ಆಡಲು ಹೋದಾಗಲೇ ಕಾಶ್ಮೀರ ಸಮಸ್ಯೆಯ ಕಾರಣಕ್ಕೆ ಆತಂಕದ ಹೊಗೆ ಎಲ್ಲೆಡೆ ದಟ್ಟವಾಗಿತ್ತು. ಮುಂದೆ ಭಾರತ–ಪಾಕಿಸ್ತಾನದ ನಡುವೆ ಕ್ರಿಕೆಟ್ ಪಂದ್ಯಗಳು ಉಭಯ ದೇಶಗಳಿಗೆ ಹೊರತಾದ ಸ್ಥಳಗಳಲ್ಲಿ ನಡೆದವು. ಶಾರ್ಜಾ ಅದಕ್ಕೆ ಉದಾಹರಣೆ.

ಕ್ರಿಕೆಟ್‌ನಲ್ಲಿ ಆಸಕ್ತಿ ಇಲ್ಲದವರು ಕೂಡ ಭಾರತ–ಪಾಕ್ ನಡುವಿನ ಪಂದ್ಯಗಳು ನಡೆದಾಗ ಟಿ.ವಿ ವಾಹಿನಿಗಳಿಗೆ ಕಣ್ಣು ಕೀಲಿಸತೊಡಗಿದರು. ಭಾರತ ಗಡಿ ಭದ್ರತಾ ಪಡೆ ಹಾಗೂ ಪಾಕಿಸ್ತಾನ್ ರೇಂಜರ್ಸ್ ಅನ್ನೂ ಈ ಪಂದ್ಯಗಳು ಭಾವನಾತ್ಮಕವಾಗಿ ಆಕರ್ಷಿಸಿದವು. ರಾಜಕಾರಣಿಗಳಿಗೂ ಅದು ಪ್ರತಿಷ್ಠೆಯ ಸಂಕೇತವಾಗಿ ಕಂಡಿತು. 'ಕ್ರಿಕೆಟ್ ರಾಯಭಾರ' ಎಂಬ ಗುಣವಿಶೇಷಣ ಹುಟ್ಟಿದ್ದೇ ಇದರಿಂದ.

ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಹೊಸ ಸಹಸ್ರಮಾನದ ಪ್ರಾರಂಭದಲ್ಲಿ ಮತ್ತೆ ಶಾಂತಿಮಂತ್ರ ಪಠಿಸಿದರು. ಲಾಹೋರ್‌ಗೆ ಬಸ್ ಚಾಲೂ ಮಾಡಿದರು. ಕ್ರಿಕೆಟಿಗರ ಬೆನ್ನುತಟ್ಟಿದರು. 'ದೋಸ್ತಿ ಆಟ' ಎನ್ನುವ ಮೂಲಕ ಮುಖದ ತುಂಬಾ ನಕ್ಕರು.

ಜಾನ್ ರೈಟ್ ಭಾರತ ತಂಡದ ಕೋಚ್ ಆಗಿದ್ದಾಗ ಆಡಿದ ಕೊನೆಯ ಏಕಪಂದ್ಯ ನಡೆದದ್ದೂ ದೆಹಲಿಯ ಫಿರೋಜ್ ಷಾ ಕೋಟ್ಲಾದಲ್ಲೇ. ಪಾಕಿಸ್ತಾನದ 303/8ಕ್ಕೆ ಉತ್ತರವಾಗಿ ಭಾರತ ಬರೀ 159 ರನ್‌ಗಳಿಗೆ ಆಲ್‌ಔಟ್ ಆಯಿತು. ಜಾನ್ ರೈಟ್‌ಗೆ ಅಂಥ ವಿದಾಯ ಬೇಕಿರಲಿಲ್ಲ. ಆದರೆ, 2005ರಲ್ಲಿ ನಡೆದ ಆರು ಏಕದಿನದ ಪಂದ್ಯಗಳ ಆ ಸರಣಿ ಮಾತ್ರ ಸ್ಮರಣೀಯ. ಮೊದಲೆರಡು ಪಂದ್ಯಗಳಲ್ಲಿ ಭಾರತ ಗೆದ್ದು ಬೀಗಿತ್ತು. ಮಹೇಂದ್ರ ಸಿಂಗ್ ದೋನಿ ಖದರು ತೋರಿದ್ದ ಆರಂಭಿದ ದಿನಗಳವು. ಅಹಮದಾಬಾದ್‌ನಲ್ಲಿ ಏಪ್ರಿಲ್ 12ರ ಸುಡುಬಿಸಿಲಿನಲ್ಲಿ ನಡೆದ ಪಂದ್ಯದಲ್ಲಿ ಕೊನೆಯ ಓವರ್ ಬೌಲ್ ಮಾಡಿದ್ದು ಸಚಿನ್ ತೆಂಡೂಲ್ಕರ್. ಬ್ಯಾಟ್ಸ್‌ಮನ್ ಇಂಜಮಾಮ್ ಉಲ್ ಹಕ್. ಬೇಕಿದ್ದುದು ಮೂರೇ ರನ್. ಮೊದಲೆರಡು ಎಸೆತ ಮೊಟ್ಟೆ. ಮೂರನೇ ಎಸೆತದಲ್ಲಿ 2. ಮತ್ತೆರಡು ಎಸೆತಗಳು ರನ್ ಬರಲಿಲ್ಲ. ಕೊನೆಯ ಎಸೆತದಲ್ಲಿ ಇಂಜಮಾಮ್ ಬೌಂಡರಿ ಹೊಡೆದು ಗೆಲ್ಲಿಸಿಬಿಟ್ಟರು. ಆಗ ಅವರು ಹೇಳಿದ್ದು – 'ಇಂಶಾ ಅಲ್ಲಾಹ್ ಎಂದು ಕಣ್ಮುಚ್ಚಿ ಬ್ಯಾಟ್ ಬೀಸಿದೆ'! ಅವರು ದೇವರನ್ನೂ ಕ್ರಿಕೆಟ್ ಕಣಕ್ಕೆ ಇಳಿಸಿಕೊಂಡಿದ್ದರು.

2014ರಲ್ಲಿ ಉತ್ತರ ಪ್ರದೇಶದ ವಿಶ್ವವಿದ್ಯಾಲಯವೊಂದರ ಕೆಲವು ವಿದ್ಯಾರ್ಥಿಗಳು ಏಷ್ಯಾ ಕಪ್ ಪಂದ್ಯಾವಳಿ ವೇಳೆ ಪಾಕಿಸ್ತಾನ ಬೆಂಬಲಿಸಿದ್ದರಿಂದ ಉಚ್ಚಾಟಿಸಲಾಗಿತ್ತು. ಅದರ ಕುರಿತು ತೀವ್ರ ಚರ್ಚೆಗಳು ನಡೆದಿದ್ದವು. ಸಚಿನ್ ಹಾಗೂ ಸುನೀಲ್ ಗಾವಸ್ಕರ್ ತರಹದವರಿಗೆ ಪಾಕಿಸ್ತಾನದ ವಿರುದ್ಧ ಆಟದ ಅನುಭವ ಎಂಥದೆನ್ನುವುದು ಗೊತ್ತಿದೆ. ಅದಕ್ಕೇ ಅವರು, 'ಆಡದೇ ಯಾಕೆ ಸೋಲೊಪ್ಪಿಕೊಳ್ಳಬೇಕು' ಎಂಬ ಧಾಟಿಯಲ್ಲಿ ಮಾತನಾಡುತ್ತಿರುವುದು. ಅದು ಕೆಲವರಿಗೆ ಬೇರೆಯದೇ ರೀತಿಯಲ್ಲಿ ಕೇಳಿಸುತ್ತಿದೆ. ಇನ್ನೊಂದು ಕಡೆ ಹರಭಜನ್ ಸಿಂಗ್, ಸೌರವ್ ಗಂಗೂಲಿ ಇಬ್ಬರೂ ಪಾಕ್ ಜೊತೆಗೆ ಯಾವ ಆಟವೂ ಬೇಡ ಎಂದು ಕಡ್ಡಿ ತುಂಡುಮಾಡಿದಂತೆ ಪ್ರತಿಕ್ರಿಯಿಸಿದ್ದಾರೆ.

ಅವೆಲ್ಲ ಚರ್ಚೆಗಳನ್ನು ಒತ್ತಟ್ಟಿಗೆ ಇಟ್ಟು ಮೆಲುಕುಹಾಕಿ. ವಕಾರ್ ಯೂನಿಸ್ ಯಾರ್ಕರ್‌ಗಳು, ಶೋಯೆಬ್ ಅಖ್ತರ್ ವೇಗದ ಗಾಳಿ, ವಸೀಂ ಅಕ್ರಂ ನಮ್ಮ ಹುಡುಗರಿಗೂ ಹೇಳಿಕೊಟ್ಟ ಬೌಲಿಂಗ್ ಪಾಠ, 2007ರಲ್ಲಿ ಮೊಹಾಲಿಯಲ್ಲಿ ಒಂದು ಕ್ರಿಕೆಟ್ ಪಂದ್ಯ ನೋಡುವ ನೆಪದಲ್ಲಿ ತನ್ನ ಪ್ರಿಯಕರನತ್ತ ತುಂಟ ನಗೆ ಬೀರಿದ್ದ ನಮ್ಮದೇ ದೇಶದ ಸಾನಿಯಾ ಮಿರ್ಜಾ, ಜಾವೆದ್ ಮಿಯಾಂದಾದ್ ಖಡಕ್ ಸಿಕ್ಸರ್, ವಿಶ್ವಕಪ್‌ನಲ್ಲಿ ಯಾವಾಗಲೂ ಪಾಕ್‌ಗೆ ಶಾಕ್ ಕೊಟ್ಟ ನಮ್ಮ ದಿಟ್ಟ ಆಟಗಾರರು, ಸಕ್ಲೇನ್ ಮುಷ್ತಾಕ್ ಚಳಕ, ಉಮರ್ ಗುಲ್ ಬೌಲಿಂಗ್ ವೈವಿಧ್ಯ, ಶಾಹಿದ್ ಅಫ್ರಿದಿಯ ಮನರಂಜನಾತ್ಮಕ ಆಟ ಹಾಗೂ ಈಗ ಪಾಕಿಸ್ತಾನದ ಪ್ರಮುಖ ರಾಜಕೀಯ ಗಾದಿಯಲ್ಲಿರುವ ಇಮ್ರಾನ್ ಖಾನ್ ಬಹಳ ಹಿಂದೆ ಸಾರಿದ ಆಲ್‌ರೌಂಡ್ ಪಾಠಗಳು... ಇವೆಲ್ಲವೂ ಭಾರತ–ಪಾಕ್ ಆಡದೇ ಇದ್ದರೆ ಸಿಗುತ್ತಲೇ ಇರಲಿಲ್ಲ, ಅಲ್ಲವೇ?